ಅಲಗಿನ ಹೊಳಪಾಗಲಿ, ನನ್ನ ಕಣ್ಣುಗಳ ಹೊಳಪಾಗಲೀ ಒಂದೂ ಕಾಣಿಸದು. ಆದರೆ, ನಾನು ಒಬ್ಬ ಸಾಮಾನ್ಯ ಕೊಲೆಗಾರನಂತೆ ಕಂಪಿಸಿರುತ್ತೇನೆ. ಅವನ ಕತ್ತಿನಿಂದ ಹರಿಯುತ್ತಿರುವ ರಕ್ತ ನನ್ನ ಕೈ, ಅವನಿಗೆ ಹೊಚ್ಚಿಸಿದ ಹೊದಿಕೆ, ಕುರ್ಚಿ ಅಲ್ಲಿಂದ ನೆಲದ ಮೇಲೆ ಹರಿದು ಹೋಗುತ್ತಿದ್ದಂತೆಯೇ ನಾನು ಅಂಗಡಿಯ ಬಾಗಿಲು ಹಾಕುತ್ತೇನೆ. ಆದರೆ ಅದು ಯಾವುದೇ ಅಡೆತಡೆಗಳಿಲ್ಲದೆ ಬಾಗಿಲ ಸಂದಿನಿಂದ ಕಡುಗೆಂಪು ಬಣ್ಣದ ಕಿರುನದಿಯಾಗಿ ಬೀದಿಗೆ ಹರಿಯುತ್ತದೆ. ನನ್ನ ಕೊಯ್ತ ಒಂದು ಚೂರು ಆಳವಾದರೆ, ಖಂಡಿತವಾಗಿಯೂ ಅವನಿಗೆ ಕಿಂಚಿತ್ತೂ ನೋವಾಗುವುದಿಲ್ಲವಷ್ಟೇ ಅಲ್ಲದೆ ಅವನಿಗೆ ಏನಾಯ್ತು ಅನ್ನುವುದೇ ಗೊತ್ತಾಗುವುದಿಲ್ಲ. ಆದರೆ ಅವನ ಮೃತದೇಹವನ್ನು ಏನು ಮಾಡಲಿ? ಎಲ್ಲಿ ಮುಚ್ಚಿಡಲಿ? ನಾನು ಇಲ್ಲಿಂದ ದೂರ... ತುಂಬಾ ದೂರ ಓಡಿ ಹೋಗಿ ಅಡಗಿಕೊಳ್ಳಬೇಕು. ಅವರು ಸುಮ್ಮನಿರುತ್ತಾರೆಯೇ? ಎಲ್ಲಿದ್ದರೂ ಹುಡುಕಿ ಹಿಡಿಯುತ್ತಾರೆ. “ಇವನೇ ಕ್ಯಾಪ್ಟನ್ ಟೋರೆಸನ ಕೊಲೆಗಾರ. ಕ್ಯಾಪ್ಟನ್ ಮುಖಕ್ಷೌರ ಮಾಡಿಸಿಕೊಳ್ಳುತ್ತಿರುವಾಗ ಹೇಡಿಯಂತೆ ಕೊಂದಿದ್ದಾನೆ!” ಮತ್ತೆ ಕೆಲವರು, “ವ್ಹಾಹ್! ಕೊನೆಗೂ ನಮ್ಮ ಜನರು ಹರಿಸಿದ ರಕ್ತಕ್ಕೆ ಮುಯ್ಯಿ ತೀರಿಸಿದ ನಮ್ಮವನೇ ಧೀರ ‘.....’ (ಇಲ್ಲಿ ನನ್ನ ಹೆಸರು)” ಎನ್ನುವರು. “ಇವನು ನಮ್ಮದೇ ಬೀದಿಯ ಕ್ಷೌರಿಕ. ಕೊನೆವರೆಗೂ ನಮ್ಮವನೆಂದು ಗೊತ್ತೇ ಆಗಲಿಲ್ಲ ನೋಡಿ!” ಹಾಗಾದರೆ ನಾನು ಯಾರು? ಕೊಲೆಗಾರನೇ? ಮಹಾಪುರುಷನೇ?

